ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .

**ಸಿ.ಸಿ.ಸಂಖ್ಯೆ: 2/2021**

| | | |
|---|---|---|
| ಸಾಕ್ಷಿದಾರರ ಹೆಸರು | ಪದ್ಮನಾಭ ಡಿ | ಸಿ.ಡಬ್ಲ್ಯೂ: 13 |
| ಗಂಡನ / ತಂದೆ ಹೆಸರು | ಧನಸೀನಾಯಕ್ | ಪಿ.ಡಬ್ಲ್ಯೂ: 8 |
| ವಯಸ್ಸು | ವರ್ಷ | |
| ಉದ್ಯೋಗ | ಮೋಟಾರು ವಾಹನ ನಿರೀಕ್ಷಕರು | |
| ವಾಸಸ್ಥಳ | ಹಾಸನ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 04.09.2025

**ಮುಖ್ಯ ವಿಚಾರಣೆಃ ಸಸಅ ರಿಂದ**

ದಿ.29.08.2020 ರಂದು ಈ ಪ್ರಕರಣದಲ್ಲಿ ವಾಹನಗಳ ತಪಾಸಣೆಗಾಗಿ ಮನವಿ ಬಂದಿದ್ದು ಅದರಂತೆ ನಾನು ಬೆ.9 ಕ್ಕೆ ಅಲೂರು ಪೊಲೀಸ್ ಠಾಣಾ ಆವರಣದಲ್ಲಿ ಇದ್ದ ಕೆಎ 13 ಎಕ್ಸ್ 5382 ವಾಹನವನ್ನು ಪರಿಶೀಲಿಸಿದಾಗ ಅದರ ಮುಂಭಾಗದ ಹೆಡ್‌ಲೈಟ್ ಇನ್ಸ್ಟುಮೆಂಟ್ ಪ್ಯಾನಲ್, ಮುಂಭಾಗದ ಬ್ಯಾಟರಿ ಕವರ್ ಮತ್ತು ಮಾಸ್ಕ್ ಜಮಕ್ ಆಗಿರುತ್ತದೆ. ಮುಂಭಾಗದ ಬಲಭಾಗದ ಸೈಡ್ ಮಿರರ್ ಒಡೆದು ಹೋಗಿರುತ್ತದೆ. ಹಿಂಭಾಗದ ಟ್ರೈಲ್ ಲೈಟ್ ಜಕಮ್ ಅಗಿರುತ್ತದೆ.

ವಾಹನ ಸಂಖ್ಯೆಕೆಎ 13 ಕೆ 6066 ವಾಹನವನ್ನು ಪರಿಶೀಲಿಸಿದಾಗ ವಾಹನದ ಮುಂಭಾದ ಚಕ್ರದ ಗಾರ್ಡ್ ಹೊಡೆದು ಹೋಗಿರುತ್ತದೆ ಮತ್ತು ಮುಂಭಾಗದ ಹೆಡ್‌ಲೈಟ್ ಮಾಸ್ಕ್ ಹೊಡೆದು ಹೋಗಿರುತತದೆ. ಸದರಿ ವಾಹನಗಳನ್ನು ಚಲಾಯಿಸಿ ನೋಡಿದಾಗ ಅದರ ಬ್ರೆಕ್ ಸಿಸ್ಟಮ್ ಸುಸ್ಥಿತಿಯಲ್ಲಿರುತ್ತದೆ. ಯಾವುದೇ ತಾಂತ್ರಿಕ ದೋಷದಿಂದ ಅಪಘಾತವಾಗಿರುವುದಿಲ್ಲ. ಅದರಂತೆ ನಾನು ವರದಿ ನೀಡಿರುತ್ತೇನೆ. ಸಾಕ್ಷಿ ನಿಪಿ 13 ರಲ್ಲಿ ತನ್ನ ಸಹಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-13 ಬಿ ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಟಿ.ಎಸ್.ಎಸ್. ವಕೀಲರಿಂದಃ**

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟ ವಾಹನಗಳನ್ನು ಪರಿಶೀಲಿಸಿರುವುದಿಲ್ಲ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .